


ಮಗ, ಅಳಿಯ ಮತ್ತು ಹೊರ ದೇಶದಲ್ಲಿ ಉದ್ಯೋಗದಲ್ಲಿರುವ ತನ್ನ ಪುರುಷ ಸಂಬಂಧಿಗಳನ್ನೆಲ್ಲ ಭಯೋತ್ಪಾದಕರು ಎಂದು ಪರಿಭಾವಿಸತೊಡಗಿದಳು.

ಅಜ್ರಾ ಆಗಾಗ್ಗೆ ಆಕೆಯನ್ನು ಕಂಪ್ಯೂಟರಿನ ಮೂಲಕ ಸಂಪರ್ಕ ಮಾಡುತ್ತಿದ್ದಳು. ರೆಹಮತ್ ಕುಳಿತಲ್ಲಿಯೆ ತನ್ನ ಮಗಳನ್ನು ಕಣ್ತುಂಬ ನೋಡುತ್ತಿದ್ದಳು ಮತ್ತು ಅವಳ ಬೆನ್ನ ಹಿಂದೆ ಆಗಾಗ್ಗೆ ಓಡಾಡುತ್ತ ಆಕೆಗೆ ಮನೆಕೆಲಸದಲ್ಲಿ ನೆರವು ನೀಡುತ್ತಿದ್ದ ತನ್ನ ಅಳಿಯನನ್ನು ಕೂಡ ಕಾಣುತ್ತಿದ್ದಳು. ಅವಳ ಮನೆಯ ಸೋಫಾ ಕುರ್ಚಿ ಅಡುಗೆ ಮನೆ, ಅಂಗಳ ಎಲ್ಲವು ಆಕೆಗೆ ಕಂಡು ಬಂದು ಅತ್ಯಂತ ಆಶ್ಚರ್ಯದಿಂದ ಕೂಡಿ ಅಗಾಧವಾದ ವಿಸ್ಮಯ ಲೋಕದಲ್ಲಿ ಮುಳುಗೇಳುತ್ತಿದ್ದಳು. ಅಷ್ಟೇ ಅಲ್ಲದೆ ಕೂಡಲೆ ಅವಳ ಮನಸ್ಸು ಅಲ್ಲಿಂದ ಜಾರಿ ಹೋಗಿ ಅನೀಸ್‌ನ ಸುತ್ತ ಸುಳಿಯುತ್ತಿತ್ತು. ಇಲ್ಲವೆ ಭಯೋತ್ಪದಕರಾಗುತ್ತಿದ್ದಾರೆ ಎಂದು ತನ್ನ ಕುಟುಂಬದ ಅನೇಕ ಗಂಡು ಮಕ್ಕಳ ಬಗ್ಗೆ ಅವಳು ಇಲ್ಲಸಲ್ಲದ ಅನೇಕ ಭಯಗಳನ್ನು ಕಲ್ಪಿಸತೊಡಗಿದಳು; ಇಲ್ಲವೆ ಭಯೋತ್ಪಾದಕರ ಗುಂಡಿಗೆ ಅಥವಾ ಸ್ಫೋಟಕ್ಕೆ ಬಲಿಯಾದ ತನ್ನ ಕುಟುಂಬದ ಹಲವಾರು ಸದಸ್ಯರನ್ನು ಕಲ್ಪಿಸತೊಡಗಿದಳು. ಅವಳು ಅಪಾರ ಖಿನ್ನತೆಗೆ ಒಳಗಾದಳು ಮತ್ತು ಅವಳ ಭಯಗಳಿಗೆ ಕೊನೆಯೇ ಇರಲಿಲ್ಲ. ಹೀಗೆ ಆಕೆ ಕೊರಗಿ ಭ್ರಾಂತಿಯಿಂದ ನರಳಿ ಯಾರೊಡನೆಯೂ ಹೇಳಿಕೊಳ್ಳಲಾಗದೆ ತನ್ನ ಮನೋಲೋಕದ ಸೆರೆಮನೆಯೊಳಗೆ ಬಂದಿಯಾದಳು. ಹೀಗೆ ಭಯಗ್ರಸ್ಥ ಮನದ ಆತಂಕಗಳ ಛಾಯೆಯಿಂದ ಹೊರ ಬರಲು ಕೊನೆಗೂ ಅವಳು ನಿರ್ಧರಿಸಿದಳು. ಯಾರು ಏನಾದರಾಗಲಿ ಇಡೀ ಲೋಕದ ಚಿಂತೆ ತನಗೇಕೆ? ಅಜ್ರಾ ನೆಮ್ಮದಿಯಿಂದ ಇದ್ದರೆ ಸಾಕು. ಹಾಗೆಯೆ ತನ್ನ ನಯಾಜ್ ಕೂಡ ಇಲ್ಲ ಸಲ್ಲದ ಉಪದ್ರವಕ್ಕೆ ಒಳಗಾಗದೆ ತನ್ನ ಮನೆ